ಸಿ ಸಿ ಸಂಖ್ಯೆ 208/2018

ಸಿ ಡಬ್ಲೂ 8 ಪಿ ಡಬ್ಲ್ಯೂ-6

**(ದಿನಾಂಕ 17.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ ಜಿ ಬಿ ವಕೀಲರಿಂದಃ-**

ಕುಬೇರ ಗೌಡ ನನ್ನ ಅಣ್ಣ. ನಮ್ಮ ಮನೆಯಿಂದ ಅವರ ಮನೆ 100 ಮೀಟರ್ ಅಂತರ ಇದೆ. ನಮ್ಮ ಮತ್ತು ಕುಬೇರ ಗೌಡನ ಮನೆಯ ನಡುವೆ ಬೇರೆ ಮನೆಗಳು ಇವೆ. ಗಲಾಟೆ ಬೆಳಿಗ್ಗೆ 8.30 ಗಂಟೆಗೆ ಆಗಿರುತ್ತದೆ. ಆಗ ನಾನು ಕೂಲಿಯವರನ್ನು ಕರೆಯಲು ಹೋಗಿದೆ. ನಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲಾ. ಕುಬೇರ ಮನೆಯ ಹತ್ತಿರ ಯಾವುದೇ ಗಲಾಟೆ ಆಗದಿದ್ದರೂ ನಾನು ಅವರ ಸಂಬಂಧಿಕ ನಾಗಿರುವ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದ್ರಪ್ಪ ಬಸವರಾಜ ಸಿದ್ದಮ್ಮನನ್ನು ಹೊಡೆಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದ್ರಪ್ಪ ಕುಬೇರಗೌಡನನ್ನು ಕುಡುಗೋಲಿನಿಂದ ಹೊಡೆಯಲು ಹೋಗಿರುವುದಿಲ್ಲಾ ಎಂದರೆ ಸರಿಯಲ್ಲ. ಮೇಘರಾಜ ಸಿದ್ದವ್ವ ರವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲಾ ಎಂದರೆ ಸರಿಯಲ್ಲ. ನಾನು ಜಗಳ ಕೂಡ ಬಿಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಆರೋಪಿತರು ಕೊಲೆ ಬೆದರಿಕೆ ಹಾಕಿರುವುದಿಲ್ಲಾ ಎಂದರೆ ಸರಿಯಲ್ಲ. ಮು ಮಾ 1 ಜಾಲಿಕಟ್ಟಿಗೆ ಎಲ್ಲಾ ಹಳ್ಳಿಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ಸರಿ. ಮು ಮಾ 1 ರಿಂದ ಆರೋಪಿತರು ಹಲ್ಲೆ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ಆಸ್ತಿ ವಿಚಾರದಲ್ಲಿ ಆರೋಪಿತರಿಗೂ ಪಿರ್ಯಾದುದಾರರಿಗೆ ಮನಸ್ತಾಪ ಇತ್ತು ಎಂದರೆ ಸರಿ. ಆರೋಪಿತರು ಹೊಲಕ್ಕೆ ಹೋಗುವಾಗ ದೂರುದಾರರೇ ಆರೋಪಿತರಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಹೀಗಾಗಿ ಆರೋಪಿ ಕೂಡ ಪಿರ್ಯಾದಿ ಮೇಲೆ ದೂರು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಯಾವುದೇ ಜಗಳ ಆಗದೇ ಇದ್ದರೂ ಕುಬೇರ ಗೌಡನಿಗೆ ಸಹಾಯ ಮಾಡಲು ಅವರ ಸಂಬಂಧಿಕನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.